# ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961

(ಕರ್ನಾಟಕ ರಾಜ್ಯಪತ್ರ, ಗುರುವಾರ ಜುಲೈ 29, 2004 ಭಾಗ–4ಎ ಪುಟ 329 ರಿಂದ 336ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ಗಳು
4. ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠದ ತೀರ್ಮಾನಗಳ ಮೇಲೆ ಅಪೀಲುಗಳು
5. ಮೊದಲನೆಯ ಅಪೀಲುಗಳು
6. ಎರಡನೆಯ ಅಪೀಲುಗಳು
7. ಅಭಿಪ್ರಾಯ ಕೋರಿ ಪೂರ್ಣ ಪೀಠಕ್ಕೆ ಒಪ್ಪಿಸುವುದು
8. ಪುನರೀಕ್ಷಣಾ ಮೊಕದ್ದಮೆಗಳನ್ನು ಸ್ವತಃ ಇತ್ಯರ್ಥ ಮಾಡಲು ಅಥವಾ ಅದನ್ನು ನ್ಯಾಯ ಪೀಠಕ್ಕೆ ಕಳುಹಿಸಲು ಏಕ ನ್ಯಾಯಾಧೀಶ ಪೀಠದ ಅಧಿಕಾರಿಗಳು
9. ಏಕ ನ್ಯಾಯಾಧೀಶ ಪೀಠದ ಇತರ ಅಧಿಕಾರಗಳು
10. ಇಬ್ಬರು ನ್ಯಾಯಾಧೀಶರನ್ನೊಳಗೊಂಡ ಪೀಠದ ಇತರ ಅಧಿಕಾರಗಳು
11. ಉಚ್ಚ ನ್ಯಾಯಾಲಯವು ರಿಜಿಸ್ಟರುಗಳನ್ನು ಇಡುವುದು
12. ರಜಾ ಅವಧಿಯ ನ್ಯಾಯಾಧೀಶ
13. ಇತ್ಯರ್ಥವಾಗದ ವ್ಯವಹರಣೆಗಳ ಸಂಬಂಧದಲ್ಲಿ ಈ ಅಧಿನಿಯಮವನ್ನು ಅನ್ವಯಿಸುವುದು
14. ನಿರಸನ
15. ಅಧಿಸೂಚನೆ – I
16. ಅಧಿಸೂಚನೆ – II


*    *    *    *

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**I**

**1962ರ ಅಧಿನಿಯಮ 5.–** ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮ, 1956ರ 50ನೇ ಪ್ರಕರಣದ ಮೂಲಕ ಹಿಂದಿನ ಮೈಸೂರು ರಾಜ್ಯದ ಉಚ್ಚ ನ್ಯಾಯಾಲಯವನ್ನು ರದ್ದುಗೊಳಿಸಿ, ಹೊಸ ರಾಜ್ಯಕ್ಕೆ ಒಂದು ಹೊಸ ಉಚ್ಚ ನ್ಯಾಯಾಲಯ ಸ್ಥಾಪನೆ ಮಾಡಿದ ಪರಿಣಾಮವಾಗಿ ಆ ಅಧಿನಿಯಮದ 52, 54 ಮತ್ತು 57ನೇ ಪ್ರಕರಣಗಳು ಹೊಸ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ, ಪದ್ಧತಿ ಮತ್ತು ಕಾರ್ಯ ವಿಧಾನ ಮತ್ತು ನ್ಯಾಯಾಧೀಶರ ಅಧಿಕಾರಗಳನ್ನು ನಿಯಮಿಸುತ್ತವೆ. ಉಚ್ಚ ನ್ಯಾಯಾಲಯವು 52ನೇ ಪ್ರಕರಣದ ಮೇರೆಗೆ, ರಾಜ್ಯದ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದಂತೆ, 1956ರ ನವೆಂಬರ್, 1ನೇ ದಿನಾಂಕಕ್ಕೆ ಮೊದಲು ಜಾರಿಯಲ್ಲಿದ್ದ ಕಾನೂನಿನ ಅಡಿಯಲ್ಲಿ ಮುಂಬಯಿ, ಹೈದರಾಬಾದ್,

ಮದ್ರಾಸ್ ಮತ್ತು ಮೈಸೂರು - ಈ ಉಚ್ಚ ನ್ಯಾಯಾಲಯಗಳು ಸಂಬಂಧಪಟ್ಟ ಪ್ರದೇಶಗಳಲ್ಲಿ ಹೊಂದಿದ್ದಂಥ ಮೂಲ ಅಪೀಲು ಅಥವಾ ಇತರ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. 54ನೇ ಪ್ರಕರಣದ ಆಧಾರದ ಮೇಲೆ, ಮೈಸೂರು ಉಚ್ಚ ನ್ಯಾಯಾಲಯ ಅಧಿನಿಯಮ, 1884ರ ಉಪಬಂಧಗಳು, ಹೊಸ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಪದ್ಧತಿ ಮತ್ತು ಕಾರ್ಯ ವಿಧಾನದ ಸಂಬಂಧದಲ್ಲಿ ಅನ್ವಯವಾಗುತ್ತವೆ ಮತ್ತು 57ನೇ ಪ್ರಕರಣದ ಆಧಾರದ ಮೇಲೆ, ಸದರಿ ಅಧಿನಿಯಮದ ಉಪಬಂಧಗಳು, ಮುಖ್ಯ ನ್ಯಾಯಾಧೀಶರ, ಏಕ ನ್ಯಾಯಾಧೀಶರ ಮತ್ತು ವಿಭಾಗೀಯ ನ್ಯಾಯಾಲಯಗಳ ಅಧಿಕಾರಗಳು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸುವಲ್ಲಿ ಸಹಾಯಕ ವಿಷಯಗಳ ಸಂಬಂಧದಲ್ಲಿ ಅನ್ವಯವಾಗುತ್ತವೆ. ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 69ನೇ ಪ್ರಕರಣದ ಮೇರೆಗೆ, ಮೇಲೆ ಹೇಳಲಾದ ಉಪಬಂಧಗಳು, ಯಾವುದೇ ವಿಧಾನಮಂಡಲವು ಅಥವಾ ಅಂಥ ಉಪಬಂಧವನ್ನು ಮಾಡುವುದಕ್ಕೆ ಅಧಿಕಾರ ಹೊಂದಿರುವ ಇತರ ಪ್ರಾಧಿಕಾರವು ಉಚ್ಚ ನ್ಯಾಯಾಲಯದ ಸಂಬಂಧದಲ್ಲಿ ಮಾಡಬಹುದಾದ ಯಾವುದೇ ಉಪಬಂಧಕ್ಕೊಳಪಟ್ಟು ಪರಿಣಾಮಕಾರಿಯಾಗತಕ್ಕದ್ದು.

ರಾಜ್ಯ ಉಚ್ಚ ನ್ಯಾಯಾಲಯವು ಇಡೀ ಹೊಸ ರಾಜ್ಯಕ್ಕೆ ಸಂಬಂಧಿಸಿದಂತೆ ಅಂಥವೇ ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಸಾಧ್ಯವಾಗುವಂತೆ ರಾಜ್ಯ ವಿಧಾನ ಮಂಡಲವು ಒಂದು ಕಾನೂನನ್ನು ಅಧಿನಿಯಮಿಸಬೇಕೆಂದು ಭಾರತ ಸರ್ಕಾರವು ಸಲಹೆ ಮಾಡಿದೆ. ಅಂತೆಯೇ, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚನೆ ನಡೆಸಿ ಈ ವಿಧೇಯಕವನ್ನು ಸಿದ್ಧಪಡಿಸಲಾಗಿದೆ. ಕಾನೂನು ಆಯೋಗದ ಶಿಫಾರಸ್ಸುಗಳನ್ನು ಸಹ ಪರಿಗಣಿಸಲಾಗಿದೆ.

ಏಕ ಸದಸ್ಯ ನ್ಯಾಯಪೀಠ ಮತ್ತು ಇಬ್ಬರು ಸದಸ್ಯರ ನ್ಯಾಯಪೀಠವು ವಿಚಾರಣೆ ಮಾಡಬೇಕಾದ ಪ್ರಕರಣಗಳನ್ನು ನಿರ್ದಿಷ್ಟಪಡಿಸಿ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ. ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಏಕ ಸದಸ್ಯ ನ್ಯಾಯ ಪೀಠವು ನೀಡುವ ತೀರ್ಪುಗಳ ಸಂಬಂಧದಲ್ಲಿ ಇಬ್ಬರು ಸದಸ್ಯರಿರುವ ನ್ಯಾಯಪೀಠಕ್ಕೆ ಅಪೀಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ, ಎಲ್ಲಾ ಕ್ರಿಮಿನಲ್ ಅಪೀಲುಗಳನ್ನು ಇಬ್ಬರು ಸದಸ್ಯರುಳ್ಳ ನ್ಯಾಯಪೀಠವು ವಿಚಾರಣೆ ನಡೆಸುತ್ತಿದೆ, ಮತ್ತು ಇದರಿಂದ, ಅಂಥ ಅಪೀಲುಗಳನ್ನು ಇತ್ಯರ್ಥಪಡಿಸುವಲ್ಲಿ ಬಹಳಷ್ಟು ವಿಳಂಬ ಉಂಟಾಗುತ್ತಿದೆ. ಆದುದರಿಂದ, ಏಕ ನ್ಯಾಯ ಪೀಠದಿಂದ ವಿಚಾರಣೆ ನಡೆದು, ಯಾರೇ ಆಪಾದಿತನ ವಿರುದ್ಧ ಮರಣ ದಂಡನೆಯ ಶಿಕ್ಷೆ, ಜೀವಾವಧಿ ಶಿಕ್ಷೆ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆ ವಿಧಿಸದಿರುವಂಥ ತೀರ್ಪುಗಳ ವಿರುದ್ಧ ಕ್ರಿಮಿನಲ್ ಅಪೀಲುಗಳನ್ನು ಸಲ್ಲಿಸುವುದಕ್ಕೆ, 5ನೇ ಖಂಡದಲ್ಲಿ ಉಪಬಂಧ ಕಲ್ಪಿಸಲಾಗಿದೆ. 6ನೇ ಖಂಡದ ಆಧಾರದ ಮೇಲಿನ ಎಲ್ಲಾ ಅಪೀಲುಗಳನ್ನು ಏಕ ಸದಸ್ಯ ನ್ಯಾಯಪೀಠವು ವಿಚಾರಣೆ ನಡೆಸುವುದು. ದೀರ್ಘ ರಜಾ ಅವಧಿಯಲ್ಲಿ ಉಚ್ಚ ನ್ಯಾಯಾಲಯದ ತುರ್ತು ಕೆಲಸದ ವಿಲೇವಾರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ. 12ನೇ ಖಂಡವು ಇದಕ್ಕೆ ಉಪಬಂಧ ಕಲ್ಪಿಸುತ್ತದೆ.

(ಕಡತ ಸಂಖ್ಯೆ:ಲಾ 126 ಎಲ್‌ಜಿಎನ್ 58 ಇದರಿಂದ ಪಡೆಯಲಾಗಿದೆ).

## II

**1969ರ ತಿದ್ದುಪಡಿ ಮಾಡುವ ಅಧಿನಿಯಮ 20.–** ಮೈಸೂರು ಉಚ್ಚ ನ್ಯಾಯಾಲಯ ಅಧಿನಿಯಮ, 1961ರ 3ನೇ ಪ್ರಕರಣವು, ಉಚ್ಚ ನ್ಯಾಯಾಲಯವು ಒಬ್ಬ ರಿಜಿಸ್ಟ್ರಾರನನ್ನು ಮತ್ತು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಸರ್ಕಾರವು ನಿರ್ದಿಷ್ಟಪಡಿಸಬಹುದಾದಷ್ಟು ಜನ ಉಪ-ರಿಜಿಸ್ಟ್ರಾರರುಗಳನ್ನು ಹೊಂದುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಉಚ್ಚ ನ್ಯಾಯಾಲಯವು, ಹೆಚ್ಚುವರಿ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ ಮತ್ತು ಸಹಾಯಕ ರಿಜಿಸ್ಟ್ರಾರರುಗಳನ್ನು ನೇಮಕ ಮಾಡಿಕೊಳ್ಳಲು ಉಪಬಂಧ ಕಲ್ಪಿಸಬೇಕೆಂದು ಶಿಫಾರಸು ಮಾಡಿದೆ. ಈ ಅಧಿಕಾರಿಗಳು, ಉಚ್ಚ

ನ್ಯಾಯಾಲಯದ ನಿಯಮಗಳ ಮೇರೆಗೆ, ಮಾನ್ಯ ಮುಖ್ಯ ನ್ಯಾಯಾಧೀಶರು ಅವರಿಗೆ ವಹಿಸಿಕೊಡಬಹುದಾದ ಶಾಸನಬದ್ಧ ಪ್ರಕಾರ್ಯಗಳನ್ನು ಚಲಾಯಿಸಬೇಕಾಗಿರುವುದರಿಂದ ಅಧಿನಿಯಮವನ್ನು ಯುಕ್ತವಾಗಿ ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ 23ನೇ ಆಗಸ್ಟ್, 1969ರಲ್ಲಿ ಸಂಖ್ಯೆ.41ರ ಪುಟ ಸಂಖ್ಯೆ 3ರಲ್ಲಿ ಪ್ರಕಟಿಸಲಾಗಿದೆ).

## III

**1973ರ ತಿದ್ದುಪಡಿ ಮಾಡುವ ಅಧಿನಿಯಮ 12.–** ಪ್ರಸ್ತುತ, ಭಾರತ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡ ಮತ್ತು 227ನೇ ಮತ್ತು 228ನೇ ಅನುಚ್ಛೇದಗಳ ಮೇರೆಗಿನ ಎಲ್ಲಾ ಅರ್ಜಿಗಳನ್ನು ಇಬ್ಬರು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು ವ್ಯವಹರಿಸುತ್ತಿದೆ. ಕೇರಳ, ಮದ್ರಾಸು, ನಾಗಪುರ, ಅಲಹಾಬಾದ್, ದೆಹಲಿ, ಆಂಧ್ರ ಪ್ರದೇಶ ಮತ್ತು ಮುಂಬಯಿ ಉಚ್ಚ ನ್ಯಾಯಾಲಯಗಳಲ್ಲಿ ಅಂಥ ಅರ್ಜಿಗಳನ್ನು ಏಕ ಸದಸ್ಯ ನ್ಯಾಯಪೀಠವು ವ್ಯವಹರಿಸುತ್ತದೆ ಮತ್ತು ಅಪೀಲಿನ ಹಕ್ಕನ್ನು, ಬಾಧಿತನಾದ ಪಕ್ಷಕಾರನಿಗೆ ನೀಡಲಾಗಿದೆ ಮತ್ತು ಅಂಥ ಅಪೀಲುಗಳನ್ನು ಇಬ್ಬರು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು ವ್ಯವಹರಿಸುತ್ತದೆ. ಇದಲ್ಲದೆ, 1957 ಮತ್ತು 1960 ರಲ್ಲಿ ನಡೆದ ಕಾನೂನು ಸಚಿವರ ಸಮ್ಮೇಳನವು, ಅಂಥ ಅರ್ಜಿಗಳನ್ನು, ಏಕ ಸದಸ್ಯ ನ್ಯಾಯಪೀಠವು ವ್ಯವಹರಿಸಬೇಕೆಂದು ಮತ್ತು ಇಬ್ಬರು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠಕ್ಕೆ ಅಪೀಲು ಸಲ್ಲಿಸಲು ಪಕ್ಷಕಾರರಿಗೆ ಹಕ್ಕು ನೀಡಬೇಕೆಂದು ಅಭಿಪ್ರಾಯಪಟ್ಟಿತ್ತು. ಕಾನೂನು ಆಯೋಗವು, ತನ್ನ ಹದಿನಾಲ್ಕನೇ ವರದಿಯ ಸಂಪುಟ IIರಲ್ಲಿ ಈ ವಿಷಯವನ್ನು ಪರಿಶೀಲಿಸುವಾಗ ನಿರ್ದಿಷ್ಟವಾಗಿ ಮದ್ರಾಸನ್ನು ಉಲ್ಲೇಖಿಸುವುದರೊಂದಿಗೆ ಅಂಥ ಪ್ರಕ್ರಿಯೆಯು ತೃಪ್ತಿಕರ ಫಲಿತಾಂಶವನ್ನು ನೀಡಿದೆ ಎಂದು ತಿಳಿಸಿದೆ. ರಿಟ್ ಅರ್ಜಿಗಳ ಮತ್ತು ಸಂಬಂಧಪಟ್ಟ ವಿಷಯಗಳ ವಿಲೇವಾರಿಯನ್ನು ನಿಯಮಿಸುವ ತತ್ತ್ವಗಳ ಬಗ್ಗೆ ವಿವಿಧ ಉಚ್ಚ ನ್ಯಾಯಾಲಯಗಳ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಂದ ಈಗ ಸಾಕಷ್ಟು ಸ್ಪಷ್ಟೀಕರಣ ದೊರೆತಿರುವುದರಿಂದ, ಇಬ್ಬರು ನ್ಯಾಯಾಧೀಶರನ್ನು ಒಳಗೊಂಡ ಪೀಠಕ್ಕೆ ಅಪೀಲು ಸಲ್ಲಿಸಲು ಪಕ್ಷಕಾರರಿಗೆ ಹಕ್ಕು ಕೊಡುವುದರೊಂದಿಗೆ ಭಾರತ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡದ ಮೇರೆಗಿನ ಅರ್ಜಿಗಳನ್ನು (ಹೇಬಿಯಸ್ ಕಾರ್ಪಸ್ ಸ್ವರೂಪದ ರಿಟ್‌ನಲ್ಲಿ ಆದೇಶ ನೀಡಬೇಕೆಂಬ ಕೋರಿಕೆ ಹೊರತುಪಡಿಸಿ) ಮತ್ತು ಸಂವಿಧಾನದ 227 ಮತ್ತು 228 ಈ ಅನುಚ್ಛೇದಗಳ ಮೇರೆಗಿನ ಅರ್ಜಿಗಳ ಬಗ್ಗೆ ವ್ಯವಹರಿಸುವುದಕ್ಕೆ ಏಕ ಸದಸ್ಯ ನ್ಯಾಯಪೀಠಕ್ಕೆ ಅಧಿಕಾರವನ್ನು ಕೊಡುವುದು ಯುಕ್ತವೆಂದು ಪರಿಗಣಿಸಲಾಗಿದೆ. ಈ ಪ್ರಕ್ರಿಯೆಯು, ಅಂಥ ಅರ್ಜಿಗಳ ಇನ್ನಷ್ಟು ಕ್ಷಿಪ್ರ ವಿಲೇವಾರಿಗೆ ಅನುಕೂಲವಾಗಬಹುದೆಂದು ಮತ್ತು ಸಂವಿಧಾನದ (ಮೂವತ್ತನೇ) ತಿದ್ದುಪಡಿಯ ಕಾರಣದಿಂದಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಲು ಯಾರ ಹಕ್ಕು ಸಾಕಷ್ಟು ನಿರ್ಬಂಧಿತಗೊಂಡಿರುವುದೋ ಅಂಥ ಬಾಧಿತನಾದ ಪಕ್ಷಕಾರನಿಗೆ ಒಂದು ಅಪೀಲಿನ ಹಕ್ಕನ್ನು ಕೂಡ ಒದಗಿಸಬಹುದೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 2ನೇ ಮೇ, 1973 ರಲ್ಲಿ ಕ್ರಮಸಂಖ್ಯೆ 432ರ ಪುಟ 4 ರಲ್ಲಿ ಪ್ರಕಟವಾಗಿದೆ).

## IV

**1980ರ ತಿದ್ದುಪಡಿ ಮಾಡುವ ಅಧಿನಿಯಮ 13.–** ನಗರ ಸಿವಿಲ್ ನ್ಯಾಯಾಲಯಗಳು ಮುಂಬಯಿ, ಮದ್ರಾಸು, ಕಲ್ಕತ್ತ, ಹೈದ್ರಾಬಾದು ಮತ್ತು ಅಹ್ಮದಾಬಾದ್ ಮಹಾ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಮೇಲೆ ಹೆಸರಿಸಲಾದ ಇತರ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಸಿವಿಲ್ ನ್ಯಾಯಾಲಯಗಳ ಮಾದರಿಯಲ್ಲಿ ಒಂದು ನಗರ ಸಿವಿಲ್ ನ್ಯಾಯಾಲಯವನ್ನು ಬೆಂಗಳೂರು ನಗರದಲ್ಲಿ ಸಹ ರಚಿಸಬಹುದೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಅಂಥ ಒಂದು ನಗರ ಸಿವಿಲ್ ನ್ಯಾಯಾಲಯವನ್ನು ರಚಿಸಿದಾಗ ಸೆಷನ್ಸ್ ನ್ಯಾಯಾಧೀಶನು, ಅನನ್ಯವಾಗಿ ಕ್ರಿಮಿನಲ್ ಮೊಕದ್ದಮೆಗಳ ಸಂಬಂಧದ ಕಾರ್ಯಗಳ ಬಗ್ಗೆ ವ್ಯವಹರಿಸುತ್ತಾನೆ ಮತ್ತು ಮ್ಯಾಜಿಸ್ಟ್ರೇಟರುಗಳ ನ್ಯಾಯಾಲಯಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ನಡೆಸುತ್ತಾನೆ. ನಗರ ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಮಾತ್ರ ಅಪೀಲು ಮಾಡಿಕೊಳ್ಳಲು ಅವಕಾಶವಿರುವುದರಿಂದ, ಇದು, ಪ್ರಕರಣಗಳನ್ನು ವಿಲೆ ಮಾಡುವಲ್ಲಿನ ವಿಳಂಬವನ್ನು ಕಡಿಮೆ ಗೊಳಿಸುವುದಲ್ಲದೆ, ವ್ಯಾಜ್ಯದ ವೆಚ್ಚವನ್ನು ಕೂಡ ತಗ್ಗಿಸುತ್ತದೆ.

ಆದುದರಿಂದ, ಸರ್ಕಾರವು, ಬೆಂಗಳೂರು ನಗರಕ್ಕೆ ಒಂದು ನಗರ ಸಿವಿಲ್ ನ್ಯಾಯಾಲಯವನ್ನು ರಚಿಸುವುದು ಅವಶ್ಯವೆಂದು ಪರಿಗಣಿಸಿದೆ. ಸಿವಿಲ್ ನ್ಯಾಯಾಲಯಗಳಲ್ಲಿ ದೀರ್ಘ ರಜೆಯನ್ನು ರದ್ದುಗೊಳಿಸಲು ಸಹ ಪ್ರಸ್ತಾವಿಸಿದೆ.

ಆದುದರಿಂದ ಈ ವಿಧೇಯಕ.

**ಟಿಪ್ಪಣಿ.–** ಈ ಅಧಿನಿಯಮದ ಮೂಲಕ, ನಗರ ಸಿವಿಲ್ ನ್ಯಾಯಾಲಯದ ಸ್ಥಾಪನೆಯ ಪರಿಣಾಮವಾಗಿ 1962ರ ಅಧಿನಿಯಮ 5ಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 16ನೇ ಮೇ, 1979ರಲ್ಲಿ ಸಂಖ್ಯೆ. 473ರ ಪುಟ 14 ರಲ್ಲಿ ಪ್ರಕಟವಾಗಿದೆ).

## V

**1994ರ ತಿದ್ದುಪಡಿ ಮಾಡುವ ಅಧಿನಿಯಮ 6.–** ಉಚ್ಚ ನ್ಯಾಯಾಲಯದ ಬಾಕಿ ಉಳಿದಿರುವ ವ್ಯಾಜ್ಯಗಳ ಸಮಿತಿಯ ಸಲಹೆಗಳ ಮೇಲೆ, ಕರ್ನಾಟಕ ಉಚ್ಚ ನ್ಯಾಯಾಲಯವು, ಕಡಿಮೆ ವೆಚ್ಚದಲ್ಲಿ ಪ್ರಕರಣಗಳ ತ್ವರಿತ ವಿಲೆಗೆ ಅನುಕೂಲವಾಗುವಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿನಿಯಮದ 5ನೇ ಪ್ರಕರಣದ ತಿದ್ದುಪಡಿಗೆ ಶಿಫಾರಸು ಮಾಡಿದೆ.

ಆದುದರಿಂದ ಈ ವಿಧೇಯಕ.

(ಕಡತ ಸಂಖ್ಯೆ: ಲಾ 47 ಎಲ್‌ಜಿಎನ್ 93 ಇದರಿಂದ ಪಡೆಯಲಾಗಿದೆ).

* * * *

# 1962ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 5

(ಇದು 1962ರ ಫೆಬ್ರವರಿ ಮೊದಲ ದಿನದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ಉಚ್ಚ ನ್ಯಾಯಾಲಯ ಅಧಿನಿಯಮ, 1961

(ಇದು 1961ರ ಡಿಸೆಂಬರ್ ಇಪ್ಪತ್ತೈದರಂದು ರಾಷ್ಟ್ರಪತಿಗಳ ಅನುಮೋದನೆ ಪಡೆದಿದೆ.)

(ಇದು 1969ರ 20, 1973ರ 12, 1980ರ 13 ಮತ್ತು 1994ರ 6ನೇ ಕರ್ನಾಟಕ ಅಧಿನಿಯಮಗಳಿಂದ ತಿದ್ದುಪಡಿಯಾಗಿದೆ.)

**ನ್ಯಾಯಾಡಳಿತ ನಿರ್ವಹಣೆಗೆ ಸಂಬಂಧಿಸಿದಂತೆ [1][ಕರ್ನಾಟಕ ರಾಜ್ಯ][1]ದ ಉಚ್ಚ ನ್ಯಾಯಾಲಯದ ಕಾರ್ಯಕಲಾಪಗಳನ್ನು ಮತ್ತು ಅಧಿಕಾರಗಳ ಚಲಾವಣೆಯನ್ನು ವಿನಿಯಮಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಮತ್ತು ಅದರ ಅಧಿಕಾರ ವ್ಯಾಪ್ತಿಯ ಬಗ್ಗೆ ಉಪಬಂಧ ಕಲ್ಪಿಸಲು ಅಧಿನಿಯಮ.**

ನ್ಯಾಯಾಡಳಿತ ನಿರ್ವಹಣೆಗೆ ಸಂಬಂಧಿಸಿದಂತೆ [1][ಕರ್ನಾಟಕ ರಾಜ್ಯ][1]ದ ಉಚ್ಚ ನ್ಯಾಯಾಲಯದ ಕಾರ್ಯಕಲಾಪಗಳನ್ನು ಮತ್ತು ಅಧಿಕಾರಗಳ ಚಲಾವಣೆಯನ್ನು ವಿನಿಯಮಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಮತ್ತು ಅದರ ಅಧಿಕಾರ ವ್ಯಾಪ್ತಿ ಮತ್ತು ಇದರಲ್ಲಿ ಇನ್ನು ಮುಂದೆ ಕಾಣಿಸಲಾದ ಇತರ ವಿಷಯಗಳ ಬಗ್ಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದು:

1. 1973ರ ಕರ್ನಾಟಕ ಕಾನೂನಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಉಚ್ಚ ನ್ಯಾಯಾಲಯದ ಅಧಿನಿಯಮ, 1961 ಎಂದು ಕರೆಯತಕ್ಕದು.

1. 1973ರ ಕರ್ನಾಟಕ ಕಾನೂನಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದು.

**2. ಪರಿಭಾಷೆಗಳು: ಈ ಅಧಿನಿಯಮದಲ್ಲಿ,–**

(1) "ಮುಖ್ಯ ನ್ಯಾಯಾಧೀಶ" ಎಂದರೆ, [1][ಕರ್ನಾಟಕ ರಾಜ್ಯ][1]ದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶ;

1. 1973ರ ಕರ್ನಾಟಕ ಕಾನೂನಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) "ಕ್ರಿಮಿನಲ್ ಅಪೀಲು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಕೆಳಗಿನ ಹಂತದ ಕ್ರಿಮಿನಲ್ ನ್ಯಾಯಾಲಯವು ತನ್ನ ಮೂಲ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಹೊರಡಿಸಿದ ಆದೇಶ ಅಥವಾ ಶಿಕ್ಷೆಯ ಮೇಲೆ ಉಚ್ಚನ್ಯಾಯಾಲಯಕ್ಕೆ ಅಪೀಲು ಹೋಗಲು ಅವಕಾಶವಿರುವ ಅಪೀಲು;

(3) "ಮೊದಲನೆಯ ಅಪೀಲು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಯಾವುದೇ ಕೆಳಗಿನ ಹಂತದ ಸಿವಿಲ್ ನ್ಯಾಯಾಲಯವು ತನ್ನ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಹೊರಡಿಸಿದ ತೀರ್ಪು, ಡಿಕ್ರಿ ಅಥವಾ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅಪೀಲು;

(4) "ಪೂರ್ಣ ಪೀಠ" ಎಂದರೆ, ಉಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರುಗಳಿಗಿಂತ ಕಡಿಮೆಯಲ್ಲದ ಸಂಖ್ಯೆಯ ನ್ಯಾಯಾಧೀಶರನ್ನೊಳಗೊಂಡ ಪೀಠ;

(5) "ಉಚ್ಚ ನ್ಯಾಯಾಲಯ" ಎಂದರೆ, [1][ಕರ್ನಾಟಕ ರಾಜ್ಯ][1]ದ ಉಚ್ಚನ್ಯಾಯಾಲಯ;

1. 1973ರ ಕರ್ನಾಟಕ ಕಾನೂನಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(6) "ಎರಡನೆಯ ಅಪೀಲು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಕೆಳಗಿನ ಹಂತದ ಯಾವುದೇ ಸಿವಿಲ್ ನ್ಯಾಯಾಲಯವು ತನ್ನ ಅಪೀಲು ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಹೊರಡಿಸಿದ ತೀರ್ಪು, ಡಿಕ್ರಿ ಅಥವಾ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅಪೀಲು.

**3. ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ಗಳು.–** [1][(1)][1] ಉಚ್ಚನ್ಯಾಯಾಲಯವು, ಒಬ್ಬ ರಿಜಿಸ್ಟ್ರಾರನ್ನು ಮತ್ತು ರಾಜ್ಯಪಾಲರು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಡೆಪ್ಯುಟಿ ರಿಜಿಸ್ಟ್ರಾರನ್ನು ಹೊಂದಿರತಕ್ಕುದು.

[1][(2) ಉಚ್ಚ ನ್ಯಾಯಾಲಯವು, ರಾಜ್ಯಪಾಲರು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಅಡಿಷನಲ್ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್ ಮತ್ತು ಸಹಾಯಕ ರಿಜಿಸ್ಟ್ರಾರರನ್ನು ಸಹ ಹೊಂದಿರತಕ್ಕುದು.][1]

1. 1969ರ ಅಧಿನಿಯಮ ಸಂಖ್ಯೆ 20ರ ಮೂಲಕ 19-9-1969ರಿಂದ ಜಾರಿಗೆ ಬರುವಂತೆ 3ನೇ ಪ್ರಕರಣಕ್ಕೆ (1)ನೇ ಉಪಪ್ರಕರಣವೆಂದು ಪುನರ್ ಸಂಖ್ಯೆ ನೀಡಲಾಗಿದೆ ಮತ್ತು (2)ನೇ ಉಪಪ್ರಕರಣವನ್ನು ಹೊಸದಾಗಿ ಸೇರಿಸಲಾಗಿದೆ.

**4. ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠದ ತೀರ್ಮಾನಗಳ ಮೇಲೆ ಅಪೀಲುಗಳು.–** ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಉಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಏಕ ಸದಸ್ಯ ನ್ಯಾಯಧೀಶ ಪೀಠವು ಹೊರಡಿಸಿದ ತೀರ್ಪು, ಡಿಕ್ರಿ, ಆದೇಶ ಅಥವಾ ಶಿಕ್ಷೆಯ ವಿರುದ್ಧ ಅಪೀಲನ್ನು ಉಚ್ಚ ನ್ಯಾಯಾಲಯದ ಇಬ್ಬರು ಇತರ ನ್ಯಾಯಾಧೀಶರನ್ನೊಳಗೊಂಡ ಪೀಠಕ್ಕೆ ಸಲ್ಲಿಸತಕ್ಕುದು ಮತ್ತು ಅದು ಅದರ ವಿಚಾರಣೆ ನಡೆಸತಕ್ಕುದು.

[1][**5. ಮೊದಲನೆಯ ಅಪೀಲುಗಳು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ,-

(i) ಮೂರು ಲಕ್ಷ ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಿನ ಮೌಲ್ಯದ ವಿಷಯದ ಸಂಬಂಧದಲ್ಲಿನ ದಾವೆ ಅಥವಾ ಇತರ ವ್ಯವಹರಣೆಗಳಲ್ಲಿ ಹೊರಡಿಸಲಾದ ಡಿಕ್ರಿ ಅಥವಾ ಆದೇಶದ ವಿರುದ್ಧದ ಎಲ್ಲಾ ಮೊದಲನೆಯ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಇಬ್ಬರಿಗಿಂತ ಕಡಿಮೆ ಇಲ್ಲದ ನ್ಯಾಯಾಧೀಶರುಗಳನ್ನು ಒಳಗೊಂಡ ನ್ಯಾಯಪೀಠವು ವಿಚಾರಣೆ ನಡೆಸತಕ್ಕುದು ಮತ್ತು ಮೊದಲನೆಯ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠವು ವಿಚಾರಣೆ ನಡೆಸತಕ್ಕುದು.

(ii) ಮರಣದಂಡನೆ ಅಥವಾ ಕಾರಾವಾಸದ ಶಿಕ್ಷೆ ನೀಡಿದ ತೀರ್ಪುಗಳ ವಿರುದ್ಧ ಮತ್ತು ಮರಣ ದಂಡನೆ ಅಥವಾ ಆಜೀವ ಕಾರಾವಾಸದಿಂದ ಶಿಕ್ಷಿಸಬಹುದಾದ ಅಪರಾಧಗಳ ಮೊಕದ್ದಮೆಗಳಲ್ಲಿ ಖುಲಾಸೆ ಮಾಡಿರುವ ತೀರ್ಪುಗಳ ವಿರುದ್ಧದ ಎಲ್ಲ ಕ್ರಿಮಿನಲ್ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆಯಿಲ್ಲದ ನ್ಯಾಯಾಧೀಶರನ್ನು ಒಳಗೊಂಡ ಒಂದು ನ್ಯಾಯಪೀಠವು ವಿಚಾರಣೆ ನಡೆಸತಕ್ಕುದು

ಮತ್ತು ಇತರ ಕ್ರಿಮಿನಲ್ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠವು ವಿಚಾರಣೆ ನಡೆಸತಕ್ಕುದು.][1]

1. 1994ರ ಅಧಿನಿಯಮ ಸಂಖ್ಯೆ 6ರ ಮೂಲಕ 8-3-1994ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಎರಡನೆಯ ಅಪೀಲುಗಳು.–** ಎಲ್ಲಾ ಎರಡನೆಯ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠವು ವಿಚಾರಣೆ ಮಾಡತಕ್ಕುದು ಮತ್ತು ಇತ್ಯರ್ಥ ಮಾಡತಕ್ಕುದು:

ಪರಂತು, ನ್ಯಾಯಾಧೀಶರು, ಮೊಕದ್ದಮೆಯು ಕಾನೂನಿನ ಗಮನಾರ್ಹ ಪ್ರಶ್ನೆಯನ್ನೊಳಗೊಂಡಿದೆ ಅಥವಾ ನ್ಯಾಯೋದ್ದೇಶದ ದೃಷ್ಟಿಯಿಂದ ಆ ಮೊಕದ್ದಮೆಯು ನ್ಯಾಯಾಧೀಶರುಗಳ ಪೀಠದಿಂದ ವಿಚಾರಣೆ ಯಾಗಬೇಕು ಮತ್ತು ಇತ್ಯರ್ಥವಾಗಬೇಕು ಎಂಬ ಬಗ್ಗೆ ತಮಗೆ ಮನದಟ್ಟಾದರೆ ಆ ಎರಡನೇ ಅಪೀಲನ್ನು ಅಂಥ ಪೀಠಕ್ಕೆ ವಿಚಾರಣೆಗಾಗಿ ಮತ್ತು ಇತ್ಯರ್ಥಕ್ಕಾಗಿ ಕಳುಹಿಸಬಹುದು.

**7. ಅಭಿಪ್ರಾಯ ಕೋರಿ ಪೂರ್ಣ ಪೀಠಕ್ಕೆ ಒಪ್ಪಿಸುವುದು.–** (1) ಉಚ್ಚ ನ್ಯಾಯಾಲಯದ ಇಬ್ಬರಿಗೆ ಕಡಿಮೆಯಿಲ್ಲದ ನ್ಯಾಯಾಧೀಶರನ್ನೊಳಗೊಂಡ ಪೀಠವು, ತನ್ನ ಮುಂದೆ ಇತ್ಯರ್ಥವಾಗದೆ ಉಳಿದಿರುವ ಯಾವುದೇ ವ್ಯವಹರಣೆಯಲ್ಲಿ ಯಾವುದೇ ಕಾನೂನಿನ ಪ್ರಶ್ನೆ ಅಥವಾ ಕಾನೂನು ಬಲವುಳ್ಳ ಆಚರಣೆಯ ಪ್ರಶ್ನೆ ಉದ್ಭವಿಸಿದಲ್ಲಿ, ತಾನು ಸೂಕ್ತವೆಂದು ಭಾವಿಸಿದರೆ, ಕಾನೂನು ಅಥವಾ ಕಾನೂನು ಬಲವುಳ್ಳ ಆಚರಣೆಯ ಪ್ರಶ್ನೆಯನ್ನು ಪೂರ್ಣಪೀಠಕ್ಕೆ ಕಳುಹಿಸಬಹುದು ಮತ್ತು ಪ್ರಶ್ನೆಯ ಮೇಲೆ ಉಚ್ಚ ನ್ಯಾಯಾಲಯದ ಸದೃಶ ಪೀಠವು ಕೈಗೊಂಡ ಅಭಿಪ್ರಾಯವು ಭಿನ್ನವಾಗಿದ್ದಲ್ಲಿ ಹಾಗೆ ಕಳುಹಿಸುವುದು ಕಡ್ಡಾಯವಾಗಿರತಕ್ಕುದು.

(2) ಉಚ್ಚ ನ್ಯಾಯಾಲಯದ ಪೂರ್ಣ ಪೀಠದಲ್ಲಿ ಇರುವ ನ್ಯಾಯಾಧೀಶರುಗಳ ಬಹುಮತದ ತೀರ್ಮಾನವೇ ಉಚ್ಚ ನ್ಯಾಯಾಲಯದ ತೀರ್ಮಾನವಾಗಿರತಕ್ಕುದು.

**8. ಪುನರೀಕ್ಷಣಾ ಮೊಕದ್ದಮೆಗಳನ್ನು ಸ್ವತಃ ಇತ್ಯರ್ಥ ಮಾಡಲು ಅಥವಾ ಅದನ್ನು ನ್ಯಾಯ ಪೀಠಕ್ಕೆ ಕಳುಹಿಸಲು ಏಕ ನ್ಯಾಯಾಧೀಶ ಪೀಠದ ಅಧಿಕಾರಗಳು.–** (1) ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಪೀಠವಾಗಿ ಕಾರ್ಯನಿರ್ವಹಿಸುವ ಯಾರೇ ನ್ಯಾಯಾಧೀಶರು, ಕಮಿಟ್ ಮಾಡುವ ಆದೇಶಗಳನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ಹೊರತುಪಡಿಸಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಉಚ್ಚ ನ್ಯಾಯಾಲಯದಲ್ಲಿ ನಿಹಿತವಾದ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಸಿವಿಲ್ ಮತ್ತು ಕ್ರಿಮಿನಲ್ ಪುನರೀಕ್ಷಣಾ ಮೊಕದ್ದಮೆಗಳ ವಿಚಾರಣೆ ನಡೆಸುವ ಮತ್ತು ಇತ್ಯರ್ಥ ಮಾಡುವ ಅಧಿಕಾರವನ್ನು ಹೊಂದಿರತಕ್ಕುದು:

ಪರಂತು, ಯಾವುದೇ ಕ್ರಿಮಿನಲ್ ನ್ಯಾಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದ ಅಂಥ ನ್ಯಾಯಾಧೀಶರ ಪೀಠವು ಮರಣ ದಂಡನೆ, ಆಜೀವ ಕಾರಾವಾಸ ಅಥವಾ ಏಳು ವರ್ಷಗಳಿಗೂ ಮೀರಿದ ಕಾರಾವಾಸ ದಂಡನೆಯನ್ನು ವಿಧಿಸತಕ್ಕುದಲ್ಲ.

(2) (1) ನೆಯ ಉಪ-ಪ್ರಕರಣದ ಮೇರೆಗಿನ ಮೊಕದ್ದಮೆಗಳಲ್ಲಿ ಏಕ ನ್ಯಾಯಾಧೀಶ ಪೀಠದ ತೀರ್ಮಾನ ಅಥವಾ ಆದೇಶವು ಅಂತಿಮವಾಗಿರತಕ್ಕುದು:

ಪರಂತು, ಅಂಥ ನ್ಯಾಯಾಧೀಶರು ಯಾವುದೇ ಅಂಥ ಮೊಕದ್ದಮೆಯನ್ನು ಮೇಲೆ ಹೇಳಲಾದ ರೀತಿಯಲ್ಲಿ ಇತ್ಯರ್ಥ ಮಾಡುವ ಬದಲು, ಅಂಥ ಮೊಕದ್ದಮೆಯನ್ನು ವಿಚಾರಣೆಗಾಗಿ ಮತ್ತು ಇತ್ಯರ್ಥಕ್ಕಾಗಿ ಇಬ್ಬರು ನ್ಯಾಯಾಧೀಶರುಗಳ ಪೀಠಕ್ಕೆ ಒಪ್ಪಿಸುವುದು ಸೂಕ್ತವೆಂದು ತಾನು ಭಾವಿಸಿದರೆ ಹಾಗೆ ಒಪ್ಪಿಸಬಹುದು.

**9. ಏಕ ನ್ಯಾಯಾಧೀಶ ಪೀಠದ ಇತರ ಅಧಿಕಾರಗಳು.–** ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಅಧಿಕಾರಗಳನ್ನು ಏಕ ನ್ಯಾಯಾಧೀಶ ಪೀಠವು ಚಲಾಯಿಸತಕ್ಕುದು. ಪರಂತು, ಯಾವ ನ್ಯಾಯಾಧೀಶರ ಮುಂದೆ ವಿಚಾರಣೆಗಾಗಿ ವಿಷಯವನ್ನು ಒಪ್ಪಿಸಲಾಗಿದೆಯೋ ಆ ನ್ಯಾಯಾಧೀಶರು, ಅದನ್ನು ಇಬ್ಬರು ನ್ಯಾಯಾಧೀಶರ ಪೀಠದಿಂದ ವಿಚಾರಣೆಯಾಗಲಿ ಮತ್ತು ತೀರ್ಮಾನವಾಗಲಿ ಎಂದು ಮುಂದಕ್ಕೆ ಹಾಕಬಹುದು:–

(i) ಅಧಿಕಾರ ವ್ಯಾಪ್ತಿಯಿರುವ ವಿವಿಧ ನ್ಯಾಯಾಲಯಗಳ ಪೈಕಿ ಯಾವ ನ್ಯಾಯಾಲಯದಲ್ಲಿ ದಾವೆಯ ವಿಚಾರಣೆಯನ್ನು ನಡೆಸಬೇಕು ಎಂಬುದನ್ನು ತೀರ್ಮಾನಿಸುವುದು;

(ii) ನಿರ್ಗತಿಕರ ಅಪೀಲಿನ ಅಂಗೀಕಾರ;

(iii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮೂಲ ಅಧಿಕಾರ ವ್ಯಾಪ್ತಿಯ ಚಲಾವಣೆ;

(iv) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಮೊದಲ ಅನುಸೂಚಿಯ XLIII ನೇ ಆದೇಶದ 1ನೇ ನಿಯಮದ ಮೇರೆಗಿನ ಅಪೀಲುಗಳು;

(v) ವೆಚ್ಚಕ್ಕೆ ಸಂಬಂಧಿಸಿದಂಥ ವಸ್ತು ವಿಷಯವುಳ್ಳ ಅಪೀಲುಗಳು ಮಾತ್ರ;

(vi) ಅಪೀಲುಗಳು ಮತ್ತು ಇತರ ವ್ಯವಹರಣೆಗಳಲ್ಲಿ ವಾದಕಾಲೀನ ಸ್ವರೂಪದ ಯಾವುದೇ ವಿಷಯ;

(vii) ಕಾಲಪರಿಮಿತಿ ಕಾನೂನು ಮೂಲಕ ಅನುಮತಿಸಲಾದ ಅವಧಿಯು ಮುಕ್ತಾಯಗೊಂಡು ಹೂಡಲಾದ ಅಪೀಲಿನ ಅಂಗೀಕಾರ;

[1][(viii) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) 389 ನೇ ಪ್ರಕರಣ, 439ನೇ ಪ್ರಕರಣ ಮತ್ತು 440 ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವುದು;][1]

(ix) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 24ನೇ ಪ್ರಕರಣದ ಮೇರೆಗಿನ ಅಥವಾ [1][ದಂಡ ಪ್ರಕ್ರಿಯಾ ಸಂಹಿತೆ, 1973ರ (1974 ರ ಕೇಂದ್ರ ಅಧಿನಿಯಮ 2) 407ನೇ ಪ್ರಕರಣದ ಮೇರೆಗಿನ][1] ಅಧಿಕಾರಗಳನ್ನು ಚಲಾಯಿಸುವುದು;

1. 1980ರ ಅಧಿನಿಯಮ ಸಂಖ್ಯೆ 13ರ ಮೂಲಕ 17-11-1980ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ (ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ)

(x) [1][x x x ][1]

1. 1980ರ ಅಧಿನಿಯಮ ಸಂಖ್ಯೆ 13ರ ಮೂಲಕ 17-11-1980ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(xi) ವಾದಕಾಲೀನ ಆದೇಶಗಳ ಮೇಲೆ ಅಪೀಲು ಸಲ್ಲಿಸಲು ಕಾನೂನು ಅನುಮತಿಸಿದ್ದರೆ, ಅಂಥ ಅಪೀಲುಗಳು;

[1][(xii) (ಎ) ಹೇಬಿಯಸ್ ಕಾರ್ಪಸ್ ಸ್ವರೂಪದ ರಿಟ್ ನೀಡಿಕೆಗೆ ಸಂಬಂಧಿಸಿದಂಥ ಅಧಿಕಾರವನ್ನು ಹೊರತುಪಡಿಸಿ, ಭಾರತದ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ; ಮತ್ತು

(ಬಿ) ಭಾರತದ ಸಂವಿಧಾನದ 227 ಮತ್ತು 228ನೆಯ ಅನುಚ್ಛೇದಗಳ ಮೇರೆಗೆ ಅಧಿಕಾರಗಳನ್ನು ಚಲಾಯಿಸುವುದು;][1]

1. 1973ರ ಅಧಿನಿಯಮ ಸಂಖ್ಯೆ 12ರ ಮೂಲಕ 16-7-1973ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ (ಅಧಿಸೂಚನೆಯ ಪಾಠವು ಅಧಿನಿಯದ ಕೊನೆಯ ಭಾಗದಲ್ಲಿದೆ)

(xiii) [1][x x x][1]

1. 1980ರ ಅಧಿನಿಯಮ ಸಂಖ್ಯೆ 13ರ ಮೂಲಕ ಸೇರಿಸಲಾಗಿದೆ ಮತ್ತು 1994ರ ಅಧಿನಿಯಮ ಸಂಖ್ಯೆ 6ರ ಮೂಲಕ 8-3-1994ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**10. ಇಬ್ಬರು ನ್ಯಾಯಾಧೀಶರನ್ನೊಳಗೊಂಡ ಪೀಠದ ಇತರ ಅಧಿಕಾರಗಳು.–** ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಇಬ್ಬರು ನ್ಯಾಯಾಧೀಶರನ್ನೊಳಗೊಂಡ ಪೀಠವು ಚಲಾಯಿಸತಕ್ಕುದು:-

(i) (ಎ) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 113ನೆಯ ಪ್ರಕರಣದ ಮೇರೆಗೆ;

[1][(ಬಿ) ದಂಡ ಪ್ರಕ್ರಿಯಾ ಸಂಹಿತೆ, 1973ರ (1974 ರ ಕೇಂದ್ರ ಅಧಿನಿಯಮ 2) 395ನೇ ಪ್ರಕರಣದ ಮೇರೆಗೆ;][1]

– ಕಳುಹಿಸಲಾಗುವ ವಿಷಯಗಳು;

1. 1980ರ ಅಧಿನಿಯಮ ಸಂಖ್ಯೆ 13ರ ಮೂಲಕ 17-11-1980ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ. (ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ).

(ii) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಮೊದಲ ಅನುಸೂಚಿಯ XLVನೇ ಆದೇಶದ 2ನೆಯ ನಿಯಮದ ಮೇರೆಗಿನ ಅರ್ಜಿ;

(iii)[1][x x x ][1]

1. 1980ರ ಅಧಿನಿಯಮ ಸಂಖ್ಯೆ 13ರ ಮೂಲಕ 17-11-1980ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(iv) ಭಾರತದ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡದ ಮೇರೆಗಿನ ಅಧಿಕಾರವು ಹೇಬಿಯಸ್ ಕಾರ್ಪಸ್ ಸ್ವರೂಪದ ರಿಟ್ ನೀಡುವುದಕ್ಕೆ ಸಂಬಂಧಪಟ್ಟಿರುವ ಸಂದರ್ಭದಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವುದು;

(ivಎ) ಭಾರತದ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡ, 227ನೇ ಅನುಚ್ಛೇದ ಮತ್ತು 228ನೇ ಅನುಚ್ಛೇದದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ ಏಕ ನ್ಯಾಯಾಧೀಶ ಪೀಠವು ಹೊರಡಿಸಿದ ಯಾವುದೇ ಮೂಲ ತೀರ್ಪು, ಆದೇಶ ಅಥವಾ ಡಿಕ್ರಿಯ ಮೇಲಿನ ಅಪೀಲು;][1]

1. 1973ರ ಅಧಿನಿಯಮ ಸಂಖ್ಯೆ 12ರ ಮೂಲಕ 16-7-1973ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(v) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿ ಇರುವ ಯಾವುದೇ ಕಾನೂನಿನಲ್ಲಿ ವ್ಯಕ್ತವಾಗಿ ಉಪಬಂಧಿಸಿಲ್ಲದ ಎಲ್ಲ ಇತರ ವಿಷಯಗಳು.

**11. ಉಚ್ಚ ನ್ಯಾಯಾಲಯವು ರಿಜಿಸ್ಟರುಗಳನ್ನು ಇಡುವುದು.–** ಉಚ್ಚ ನ್ಯಾಯಾಲಯವು, ನ್ಯಾಯಾಲಯದ ವ್ಯವಹರಣೆಗಳಿಗಾಗಿ ಅಗತ್ಯವಿರುವಂತಹ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಇಟ್ಟಿರತಕ್ಕುದು ಮತ್ತು ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದಂತೆ ಸದರಿ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಲೆಕ್ಕಪತ್ರಗಳ ಪ್ರತಿಗಳು ಅಥವಾ ಅವುಗಳಿಂದ ತೆಗೆದ ಭಾಗಗಳನ್ನು

ಹಾಗೂ ಉಚ್ಚ ನ್ಯಾಯಾಲಯ ಮತ್ತು ಅದಕ್ಕೆ ಅಧೀನವಾದ ನ್ಯಾಯಾಲಯಗಳಲ್ಲಿ ನಿರ್ವಹಿಸಲಾದ ಕಾರ್ಯದ ವಿವರಣೆಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು.

**12. ರಜಾ ಅವಧಿಯ ನ್ಯಾಯಾಧೀಶ.–** (1) ಉಚ್ಚ ನ್ಯಾಯಾಲಯದ ರಜಾ ಅವಧಿಯಲ್ಲಿ ಅಥವಾ ಅದನ್ನು ಮುಂದೆ ಹಾಕಲಾದ ಅವಧಿಯಲ್ಲಿ ಕೂಡಲೇ ಮತ್ತು ತುರ್ತಾಗಿ ವ್ಯವಹರಿಸಬೇಕಾದ ಅಗತ್ಯವಿರುವ ಎಲ್ಲ ವಿಷಯಗಳ ವಿಚಾರಣೆ ನಡೆಸುವುದಕ್ಕಾಗಿ ಮುಖ್ಯ ನ್ಯಾಯಾಧೀಶರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರನ್ನು ರಜಾ ಅವಧಿಯ ನ್ಯಾಯಾಧೀಶರೆಂದು ನಾಮ ನಿರ್ದೇಶಿಸತಕ್ಕುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧದ ಮೇರೆಗೆ ಒಬ್ಬರಿಗಿಂತ ಹೆಚ್ಚಿನ ನ್ಯಾಯಾಧೀಶರು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬೇಕಾಗಿರುವಂಥ ಮೊಕದ್ದಮೆಗಳನ್ನು ಹೊರತುಪಡಿಸಿ, ಅಂಥ ನ್ಯಾಯಾಧೀಶರು ರಜಾ ಅವಧಿಯಲ್ಲಿ ಉಚ್ಚ ನ್ಯಾಯಾಲಯದಲ್ಲಿ ನಿಹಿತವಾದ ಎಲ್ಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕುದು. ರಜೆ ಅಥವಾ ಮುಂದೂಡಿದ ಬೇರೆ ಬೇರೆ ಅವಧಿಗಳಿಗೆ ಬೇರೆ ಬೇರೆ ಏಕ ನ್ಯಾಯಾಧೀಶರನ್ನು ನೇಮಕ ಮಾಡಬಹುದು.

(2) ಉಚ್ಚ ನ್ಯಾಯಾಲಯದ ಯಾವುದೇ ರಜೆ ಮುಂದಕ್ಕೆ ಹಾಕಲಾದ ಅವಧಿಯಲ್ಲಿ ಯಾವುದೇ ಮೊಕದ್ದಮೆಯ ವಿಚಾರಣೆ ನಡೆಸುವುದಕ್ಕಾಗಿ ನ್ಯಾಯಾಧೀಶರ ಪೀಠ ಅಥವಾ ಪೂರ್ಣ ಪೀಠವನ್ನು ರಚಿಸಲು ಮುಖ್ಯ ನ್ಯಾಯಾಧೀಶರು ಸಕ್ಷಮರಾಗಿರತಕ್ಕುದು.

**13. ಇತ್ಯರ್ಥವಾಗದ ವ್ಯವಹರಣೆಗಳ ಸಂಬಂಧದಲ್ಲಿ ಈ ಅಧಿನಿಯಮವನ್ನು ಅನ್ವಯಿಸುವುದು.–** ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿರುವ ಎಲ್ಲ ಅಪೀಲುಗಳು, ಅರ್ಜಿಗಳು ಮತ್ತು ಇತರ ವ್ಯವಹರಣೆಗಳನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇತ್ಯರ್ಥ ಮಾಡತಕ್ಕುದು.

**14. ನಿರಸನ.–** ಮೈಸೂರು ಉಚ್ಚ ನ್ಯಾಯಾಲಯ ಅಧಿನಿಯಮ, 1884 (1884ರ ಮೈಸೂರು ಅಧಿನಿಯಮ 1)ರ 11, 12, 13, 14, 15, 16, 16ಎ, 16ಬಿ, 20 ಮತ್ತು 22ನೇ ಪ್ರಕರಣಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

* * * *

## ಅಧಿಸೂಚನೆ– I

ಬೆಂಗಳೂರು, ದಿನಾಂಕ 10ನೇ ಜುಲೈ, 1973 [ಸಂಖ್ಯೆ ಜಿಎಡಿ 60 ಎಸ್‌ಎಚ್‌ಸಿ 73]

**ಎಸ್.ಓ. 1116.–** ಮೈಸೂರು ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧಿನಿಯಮ, 1973 (1973ರ ಮೈಸೂರು ಅಧಿನಿಯಮ ಸಂಖ್ಯೆ 12) 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮೈಸೂರು ಸರ್ಕಾರ, 1973ರ ಜುಲೈ 16ನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರು ಹೆಸರಿನಲ್ಲಿ,

(ಆರ್.ಜಿ. ರೆಬೆಲ್ಲೊ)
ಸರ್ಕಾರದ ಮುಖ್ಯ ಕಾರ್ಯದರ್ಶಿ,

(ಕರ್ನಾಟಕ ರಾಜ್ಯಪತ್ರ (ವಿಶೇಷ) ದಿನಾಂಕ 11ನೇ ಜುಲೈ 1973ರ ಭಾಗ –IV –2 ಸಿ (ii) ಸಂಖ್ಯೆ 582 ರಲ್ಲಿ ಪ್ರಕಟಿಸಲಾಗಿದೆ).

## ಅಧಿಸೂಚನೆ– II

**ಬೆಂಗಳೂರು, ದಿನಾಂಕ 10ನೇ ನವೆಂಬರ್ 1980 [ಸಂಖ್ಯೆ ಲಾ 247 ಎಲ್‌ಜಿಇ 80]**

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979ರ (1980ರ ಕರ್ನಾಟಕ ಅಧಿನಿಯಮ 13) 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1980ರ ನವೆಂಬರ್ ಹದಿನೇಳನೇ ದಿವಸವನ್ನು ಸದರಿ ಉಪ ಪ್ರಕರಣದ ಉದ್ದೇಶಕ್ಕಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ನಾಗೇಶ್‌ರಾವ್)
ಸರ್ಕಾರದ ಉಪ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಆಡಳಿತ)

(ಕರ್ನಾಟಕ ರಾಜ್ಯಪತ್ರ (ವಿಶೇಷ) ದಿನಾಂಕ 10ನೇ ನವೆಂಬರ್ 1980ರ ಭಾಗ –IV –2 ಸಿ (ii) ಸಂಖ್ಯೆ 819 ರಲ್ಲಿ ಪ್ರಕಟಿಸಲಾಗಿದೆ).

The above translation of the Karnataka High Court Act, 1961 (5 of 1962) shall be the authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

Bangalore

**GOVERNOR OF KARNATAKA**

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ದಕ್ಷಿಣಾಮೂರ್ತಿ)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

RKB